# ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 3372/ 2022

**ಚಾಸಾ ಃ- 07 / ಪ್ರಾಸಾ ಃ- 10**

| | |
|---|---|
| ಹೆಸರು | ನರೇಂದ್ರ |
| ತಂದೆ ಹೆಸರು | ನರಸಿಂಹಮೂರ್ತಿ |
| ವಯಸ್ಸು | 60 |
| ಉದ್ಯೋಗ | ಶಿಕ್ಷಕರು |
| ವಿಳಾಸ | ಬೆಳಗುಂಭ |

**ದಿನಾಂಕಃ 01.02.2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ** ಃ-

ಚಾಸಾ-1 ರಿಂದ 6 ರವರು ಪರಿಚಯ ಇರುತ್ತಾರೆ. ಆರೋಪಿತರು ಪರಿಚಯ ಇರುತ್ತಾರೆ. ವರದಕ್ಷಿಣೆ ಕಿರುಕುಳದ ಬಗ್ಗೆ ಹೇಳಿಕೆಯನ್ನು ನೀಡಿರುತ್ತೇನೆ. ಆರೋಪಿಗಳು ಚಾಸಾ-1 ರವರಿಗೆ ಕಿರುಕುಳ ನೀಡುತ್ತಿದ್ದರು ಎಂದು ಚಾಸಾ-1 ರವರು ಹೇಳಿರುತ್ತಾರೆ. ಸದರಿ ಚಾಸಾ-1 ಹಾಗೂ 1 ನೇ ಆರೋಪಿಯವರ ವಿವಾಹವು ಕೋರೋನಾ ಸಮಯದಲ್ಲಿ ಸರಳವಾಗಿ ಆದಿಚುಂಚನಗಿರಿ ಮಠದಲ್ಲಿ ಜರುಗಿರುತ್ತದೆ. ಮದುವೆಯಾದ ಸ್ವಲ್ಪ ದಿವಸಗಳ ಕಾಲ ಮಾಗಡಿಯಲ್ಲಿ ಜೊತೆಯಲ್ಲೆ ಇದ್ದರು. ಸದರಿ ವಿವಾಹವನ್ನು ಸರಳವಾಗಿ ಮಾಡಿದ್ದರಿಂದ 150 ಗ್ರಾಂ ಬಂಗಾರವನ್ನು ವರದಕ್ಷಿಣೆಯಾಗಿ ಮಾತುಕತೆಯ ಮೂಲಕ ಕೊಟ್ಟಿರುತ್ತಾರೆ ಹಾಗೂ ಒಂದು ಇನೋವಾ ಕಾರನ್ನು ಸಹ ಕೊಡಿಸಿರುತ್ತಾರೆ. ಬೆಂಗಳೂರಿನಲ್ಲಿ ಚಾಸಾ-1 ಮತ್ತು 1 ನೇ ಆರೋಪಿಯು ಕೆಲಸ ಮಾಡುತ್ತಿದ್ದರು. ಚಾಸಾ-1 ರವರ ಸಂಬಳವನ್ನು 1 ನೇ ಆರೋಪಿಯು

ತನ್ನ ಖಾತೆಗೆ ವರ್ಗಾವಣೆ ಮಾಡಿಸಿಕೊಂಡು ಚಾಸಾ-1 ರವರಿಗೆ 100 ಹಾಗೂ 50 ರೂಪಾಯಿಗಳನ್ನು ಕೊಡುತ್ತಿದ್ದರು. 1 ನೇ ಆರೋಪಿಯು ನಾವು ಆರ್ಗಾನಿಕ್ ಫಾರಂ ಮಾಡುತ್ತೇವೆ, ಜಮೀನನ್ನು ಬರೆಸಿಕೊಂಡು ಬಾ ಎಂದು ಚಾಸಾ-1 ರವರಿಗೆ ಕಿರುಕುಳ ಕೊಡುತ್ತಿದ್ದರು. ಚಾಸಾ-1 ರವರು 1 ನೇ ಆರೋಪಿ ಜೊತೆ ಇರಲು ಆಗುವುದಿಲ್ಲವೆಂದು ಮಾಗಡಿಯಲ್ಲಿ ಗಲಾಟೆ ಆದ ನಂತರ ಚಾಸಾ-1 ರವರು ವಿಚ್ಛೇಧನಕ್ಕಾಗಿ ಅರ್ಜಿ ಸಲ್ಲಿಸಿದ್ದರು. 1 ನೇ ಆರೋಪಿಯ ತಂದೆ ತಾಯಿಯವರು ಚೆನ್ನಾಗಿ ಬಾಳಲಿ ಎಂದು 1 ನೇ ಆರೋಪಿಗೆ ಸಲಹೆಯನ್ನೂ ಸಹ ಕೊಟ್ಟಿರುವುದಿಲ್ಲ.ಆಗ 2 ಮತ್ತು 3 ನೇ ಆರೋಪಿಗಳೂ ಸಹ ಸರಳವಾಗಿ ವಿವಾಹವಾಗಿದ್ದು ಏನೂ ಕೊಟ್ಟಿರುವುದಿಲ್ಲ ಜಮೀನನ್ನು ಕೊಡಿ ಎಂದು ಕೇಳುತ್ತಿದ್ದರು. ಆ ಕಾರಣದಿಂದ ತೊಂದರೆಯಾಗಿ ವಿಚ್ಛೇಧನ ಆಗಿರುತ್ತದೆ. ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಪರ ವಕೀಲರಿಂದ ಆರೋತರ ಗುರುತಿಸುವಿಕೆಗೆ ಯಾವುದೇ ತಕರಾರು ಇರುವುದಿಲ್ಲ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಚಾಸಾ–2 ರವರು ನಿಮಗೆ ತುಂಬಾ ಪರಿಚಯವಿದ್ದು ಅವರ ಜಮೀನು ಬೆಳಗುಂಭದಲ್ಲಿ ಇರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚಾಸಾ–2 ರವರು ಆಗಾಗ ಜಮೀನಿನ ಬಳಿ ಬಂದು ನಿಗಾವಹಿಸಿಕೊಂಡು ನೋಡಿಕೊಂಡು ಹೋಗುತ್ತಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚಾಸಾ–2 ರವರಿಗೆ ಒಬ್ಬ ಗಂಡು ಮಗ ಹಾಗು ಇಬ್ಬರು ಹೆಣ್ಣು ಮಕ್ಕಳು ಇದ್ದರು ಅದರಲ್ಲಿ ಚಾಸಾ–1 ರವರು ವಿದ್ಯಾಭ್ಯಾಸವನ್ನು ಮುಗಿಸಿ ಮಾಗಡಿಯ ಬಮೂಲ್ ನಲ್ಲಿ ಪಶುವೈದ್ಯರಾಗಿ

ಕರ್ತವ್ಯ ನಿರ್ವಹಿಸುತ್ತಿದ್ದರು ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಚಾಸಾ–1 ರ ವರು ಕರ್ತವ್ಯ ನಿರ್ವಹಿಸುವ ಜಾಗದಲ್ಲಿ 1 ನೇ ಆರೋಪಿಯು ಪರಿಚಯವಾಗಿ ಅವರಿಬ್ಬರೂ ಸಹ ಮದುವೆಯಾಗಲು ನಿರ್ಧರಿಸಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಈ ವಿಚಾರವಾಗಿ ಚಾಸಾ–2 ರವರು ನಿಮ್ಮ ಹಾಗೂ ನಿಮ್ಮ ಊರಿನ ಅಶೋಕ್ ಕುಮಾರ್ ಜೊತೆ ತನ್ನ ಮಗಳ ಮದುವೆ ವಿಚಾರವಾಗಿ ವಿನಿಮಯ ನಡೆಸಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮಾತುಕತೆ ಇದೆ ಮನೆಯ ಬಳಿ ಬನ್ನಿ ಎಂದು ನಿಮ್ಮನ್ನು ಚಾಸಾ–2 ರವರು ಕರೆದುಹೋಗಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅದರಂತೆ ನೀವು, ನಿಮ್ಮ ಗ್ರಾಮದ ನರಸಿಂಹಮೂರ್ತಿ, ಅಶೋಕ್ ಕುಮಾರ್ ಮತ್ತು ನರಸೇಗೌಡರವರ ಸಂಬಂಧಿಯಾ ಕೃಷ್ಣೇಗೌಡ ಮತು ಶ್ಯಾಮಣ್ಣ ರವರು ಮಾತುಕತೆ ಕಾರ್ಯಕ್ಕೆ ಹೋಗಿದ್ದಿರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಕೋವಿಡ್ –19 ಇರುವ ಹಿನ್ನೆಲೆಯಲ್ಲಿ ಮದುವೆಯನ್ನು ಸಿಂಪಲ್ ಆಗಿ ಮಾಡಿ ಹಾಗೂ ಒಡವೆಯನ್ನು ನಿಮಗೆ ಏನು ಇಷ್ಟವೋ ಅದನ್ನು ಹಾಕಿ ಮದುವೆ ಮಾಡಿಕೊಡಿ ಎಂದು ಹೇಳಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅದಕ್ಕೆ ಚಾಸಾ–1 ಹಾಗೂ 1 ನೇ ಆರೋಪಿಯ ತಂದೆ ತಾಯಿಯವರು ಮತ್ತು ಅವರ ಸೋದರ ಮಾವಂದಿರೆಲ್ಲಾ ಒಪ್ಪಿಕೊಂಡಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಶ್ಚಿಥಾರ್ತ ಕಾರ್ಯಯವನ್ನು ಚಾಸಾ–1 ರವರು ಸೋದರ ಮಾವನ ಮನೆಯಾದ ಕುಣಿಗಲ್ ನಲ್ಲಿ ಮಾಡಿಕೊಟ್ಟಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚಾಸಾ–2 ರವರು ಚಾಸಾ–1 ಮತ್ತು 1 ನೇ ಆರೋಪಿಗೆ ಒಡವೆ ಹಾಗೂ ಬ್ರೇಸ್ ಲೇಟ್ , ಕೊರಳ ಚೈನ್ ಹಾಗೂ ಉಂಗುರ ಮತ್ತು ಬೆಳ್ಳಿ ಚೊಂಬು ತಟ್ಟೆಯನ್ನು ಕೊಟ್ಟು ದಿನಾಂಕ 04.11.2020 ರಂದು ಆದಿಚುಂಚನಗಿರಿಯಲ್ಲಿನ ಕಾಳಭೈರವೇಶ್ವರ ಸ್ವಾಮಿ ದೇವಸ್ಥಾನದ ಸನ್ನಿಧಿಯಲ್ಲಿ ಮದುವೆಯನ್ನು ಮಾಡಿಕೊಟ್ಟಿದ್ದರು ಎಂದರೆ ಸಾಕ್ಷಿ

ಹೌದು ಎಂದು ನುಡಿಯುತ್ತಾರೆ. ಚಾಸಾ–1 ಮತ್ತು 1 ನೇ ಆರೋಪಿಯು ಮಾಗಡಿಯಲ್ಲೇ ಕೆಲಸ ಮಾಡುತ್ತಿದ್ದರಿಂದ ಮಾಗಡಿಯಲ್ಲಿಯೇ ಬಾಡಿಗೆ ಮನೆ ಮಾಡಿಕೊಂಡು ವಾಸ ವಾಗಿರುತ್ತಾರೆ ಎಂಬ ವಿಚಾರ ನಿಮಗೆ ತಿಳಿದಿತ್ತು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ಸುಮಾರು ಒಂದೆರಡು ತಿಂಗಳುಗಳ ನಂತರ ಚಾಸಾ–2 ರವರು ನಿಮ್ಮ ಊರಿಗೆ ಅವರ ಜಮೀನಿನ ಬಳಿ ಬಂದಾಗ ಅಳಿಯ ಮಗಳು ಹೇಗಿದ್ದಾರೆಂದು ನೀವು ಹಾಗೂ ನರೇಂದ್ರರು ಕೇಳಿದ್ದಕ್ಕೆ ಚಾಸಾ–2 ರವರು ನನ್ನ ಮಗಳು ದುಡಿಯುವ ಸಂಬಳದಲ್ಲಿ ಯಾವ ಸ್ವಾತಂತ್ರ್ಯವನ್ನೂ ಸಹ ಕೊಡದೆ ಸಂಬಳವನ್ನು ಅವರೇ ಪಡೆದುಕೊಳ್ಳುತ್ತಾರೆ ಎಂದು ತಿಳಿಸಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಮ್ಮ ಮನೆಯಲ್ಲಿ ಗಂಡು ಮಕ್ಕಳು ಇರುವುದಿಲ್ಲ ನಿನ್ನ ಪಾಲಿನ ಜಮೀನನ್ನು ಭಾಗ ಕೇಳಿ ಪಡೆದುಕೋ ಎಂದು ಹೇಳಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆರ್ಗಾನಿಕ್ ಫಾರಂ ಅನ್ನು ತೆಗೆಯುತ್ತೇನೆ ನಿಮ್ಮ ಅಪ್ಪ ನಿನಗೆ ಮದುವೆ ಸಮಯದಲ್ಲಿ ವರದಕ್ಷಿಣೆಯಾಗಿ ಏನನ್ನೂ ಕೊಟ್ಟಿರುವುದಿಲ್ಲ ಈಗಲಾದರೂ ಕೊಡುವುದಾಗಿ ನಿಮ್ಮ ಅಪ್ಪನಿಗೆ ಹೇಳು ಎಂದು 1 ನೇ ಆರೋಪಿಯು ಬೈಯ್ಯುತ್ತಿರುತ್ತಾರೆ ಎಂದು ನಿಮಗೆ ತಿಳಿಸಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಈ ವಿಚಾರವನ್ನು 2 ಮತ್ತು 3 ನೇ ಆರೋಪಿಯವರು ಮಾಗಡಿಗೆ ಬಂದಾಗ ಚಾಸಾ–1 ರವರು ಅವರಿಗೆ ಹೇಳಿದಾಗ ಅವರೂ ಸಹ ನನ್ನ ಮಗ ಹೇಳಿದಂತೆ ನಿಮ್ಮ ತಂದೆಗೆ ಹೇಳಿ ಅವನಿಗೆ ವರದಕ್ಷಿಣೆಯಾಗಿ ಇನೋವಾ ಕಾರ್ ಹಾಗೂ ನಿನ್ನ ಪಾಲಿನ ಜಮೀನನ್ನು ಭಾಗ ಕೇಳಿ ಪಡೆದುಕೊ ಎಂದು ಹೇಳಿದ್ದರು ಎಂದು ತಿಳಿಸಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿನ್ನ ಸಂಬಳವನ್ನೆಲ್ಲಾ ನನ್ನ ಮಗನಿಗೆ ಕೊಡು ಎಂದು ಬೆದರಿಸಿ ಬೈಯ್ಯುತ್ತಿದ್ದರು ಎಂದು ನಿಮಗೆ ತಿಳಿಸಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಹಾಗೇನಾದರೂ ನೀನು

ನಿಮ್ಮಪ್ಪನ ಮನೆಯಲ್ಲಿ ನಾವು ಹೇಳಿದ್ದನ್ನು ತರದಿದ್ದರೆ ನನ್ನ ಮಗನಿಗೆ ಬೇರೆ ಮದುವೆ ಮಾಡಿ ನಿನಗೆ ಜೀವನಾಂಶವನ್ನು ಕೊಡುತ್ತೇವೆ ಎಂದು ಬೈಯ್ಯುತ್ತಾ ಮಾನಸಿಕವಾಗಿ ಹಿಂಸೆ ಕೊಡುತ್ತಿದ್ದರು ಎಂದು ತಿಳಿಸಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ಚಾಸಾ–1 ರವರು ಚಾಸಾ–2 ಮತ್ತು 3 ರವರಿಗೆ ಹೇಳಿ ಬಹಳ ಬೇಜಾರುಪಟ್ಟಿಕೊಂಡಿದ್ದರು ಎಂದು ನಿಮಗೆ ತಿಳಿಸಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆಗ ನೀವು ಹೋಗಲಿ ಬಿಡಿ ಮುಂದೆ ಎಲ್ಲಾ ಸರಿಹೋಗುತ್ತೆ ಈಗ ಇನ್ನೂ ಮದುವೆಯಾದ ಹೊಸತು ಎಂದು ಹೇಳಿ ಸಮಾಧಾನ ಮಾಡಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ದಿನಾಂಕ 26.06.2021 ರ ಂದು ಚಾಸಾ–2 ರವರ ಮಗ ಕುಲಧೀಪ್ ನ ಸ್ಮಾರಕಕ್ಕೆ ಗ್ರಾನೈಟ್ ಹಾಗೂ ಕಲ್ಲು ಕೂರಿಸುವ ಕೆಲಸ ಬಾಕಿ ಇದ್ದಿದ್ದರಿಂದ ಕೆಲಸವನ್ನು ಮುಗಿಸುವ ಸಲುವಾಗಿ ಚಾಸಾ–3 ಮತ್ತು ಅವರ ಮಕ್ಕಳೆಲ್ಲರೂ ನಿಮ್ಮ ಗ್ರಾಮಕ್ಕೆ ಬಂದಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆಗ ಚಾಸಾ–2 ರವರು ಕೆಲಸ ಮುಗಿಯುವುದು ತಡವಾಯಿತು ಚಾಸಾ–1 ರವರ ಮನೆಗೆ ಹೋಗುತ್ತೇನೆಂದು ಹೇಳಿ ಹೋಗಿರುತ್ತಾರೆಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸುಮಾರು 20 ದಿವಸಗಳ ನಂತರ ನೀವು ಯಾವುದೋ ಕೆಲಸದ ಮೇಲೆ ಬೆಂಗಳೂರಿಗೆ ಹೋಗಿದ್ದು ಹಾಗೆಯೋ ನರಸೇಗೌಡರವರ ಮನೆ ಮಾಚೋಹಳ್ಳಿಗೆ ಹೋಗಿದ್ದಾಗ ಚಾಸಾ–1 ರವರು ಚಾಸಾ 2 ರವರ ಮನೆಯಲ್ಲಿ ಇದ್ದಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಈ ಬಗ್ಗೆ ನೀವು ವಿಚಾರ ಮಾಡಿದಾಗ ಚಾಸಾ–2 ರವರು ದಿನಾಂಕ 26.06.2021 ರಂದು ನಮ್ಮಗಳ ಜೊತೆ ಚಾಸಾ1 ರವರು ನಮ್ಮ ಊರಿಗೆ ಬಂದು ತಡವಾಗಿ ಬಂದ ವಿಚಾರವಾಗಿ ನಾವು ಎಷ್ಟೇ ಹೇಳಿದರೂ ಸಹ ಕೇಳದೆ 1 ನೇ ಆರೋಪಿಯು ಚಾಸಾ1 ರವರಿಗೆ ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈಯ್ದು ನಿಮ್ಮಪ್ಪ ನನಗೆ ಏನು ವರದಕ್ಷಿಣೆ ಕೊಟ್ಟಿದ್ದಾನೆ ಎಂದು ಚಾಸಾ1 ರವರಿಗೆ ಹೊಡೆದು ನನಗೂ ಸಹ ವರದಕ್ಷಿಣೆಯಾಗಿ ಏನನ್ನು

ಕೊಟ್ಟಿದ್ದೀಯಾ ಎಂದು ಏಕವಚನದಿಂದ ಬಾಯಿಗೆ ಬಂದಂತೆ ಬೈಯ್ದು ಮನೆಯಿಂದ ನನ್ನನ್ನು ಹಾಗೂ ನನ್ನ ಹೆಂಡತಿ ಮಕ್ಕಳುಗಳನ್ನು ಆಚೆಗೆ ತಳ್ಳಿ ಗಲಾಟೆ ಮಾಡಿದ ಎಂದು ವಿಚಾರವನ್ನು ತಿಳಿಸಿದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆ ನಂತರ ನಿಮಗೆ ವಿಚಾರ ತಿಳಿಯಲಾಗಿ 1 ನೇ ಆರೋಪಿಯು ಇಷ್ಟು ದಿನವಾದರೂ ಸಹ ಚಾಸಾ1 ರವರನ್ನು ವಾಪಸ್ಸು ಮನೆಗೆ ಕರೆದುಕೊಂಡು ಹೊಗುವುದಾಗಲಿ , ಅವರ ಯೋಗಕ್ಷೇಮವನ್ನೂ ಸಹ ವಿಚಾರಿಸದೇ ಇದ್ದು ಮತ್ತು 2 ಮತ್ತು 3 ನೇ ಆರೋಪಿಗಳೂ ಸಹ ಚಾಸಾ1 ರವರ ಬಗ್ಗೆ ಯಾವುದೇ ರೀತಿಯ ಕನಿಕರವನ್ನು ವ್ಯಕ್ತ ಪಡಿಸದಿರುವುದನ್ನು ಕಂಡು ಚಾಸಾ1 ರವರು ಮಾದನಾಯಕನಹಳ್ಳಿ ಪೋಲಿಸ್ ಠಾಣೆಗೆ ದೂರು ನೀಡಿರುತ್ತಾರೆ ಎಂದು ವಿಚಾರ ತಿಳಿಯಿತು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಕೃತ್ಯ ಸ್ಥಳದ ಆಧಾರದ ಮೇಲೆ ಮಾಗಡಿ ಪೋಲಿಸ ಠಾಣೆಯಲ್ಲಿ ಪ್ರಕರಣ ದಾಖಲಾಗಿರುವ ವಿಚಾರ ನಿಮಗೆ ತಿಳಿಯಿತು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆರೋಪಿಗಳು ಚಾಸಾ1 ರವರಿಗೆ ವರದಕ್ಷಿಣೆ ಸಂಬಂಧ ಮಾನಸಿಕ ಮತ್ತು ದೈಹಿಕ ಕಿರುಕುಳ ನೀಡಿದ್ದರಿಂದ ದಿನಾಂಕ 23.11.2021 ರಂದು ನೀವು ಪೋಲಿಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಪ್ರಕರಣ ನಡೆದು 4 ವರ್ಷ ಆಗಿದ್ದರಿಂದ ಮದುವೆ ದಿನಾಂಕ ಮತ್ತು ನಿಶ್ಚಿಥಾರ್ತದ ದಿನಾಂಕ ಮರೆತಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

**ಪಾಟೀ ಸವಾಲು** ಃ- **ಶ್ರೀ. ಎಲ್ ಜಿಜಿ** ವಕೀಲರಿಂದ **ಆರೋಪಿಗಳ** ಪರವಾಗಿ ಃ-

ಹೇಳಿಕೆಯನ್ನು ಎಲ್ಲಿ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ಮಾಗಡಿ ಪೋಲಿಸ್ ಠಾಣೆಯಲ್ಲಿ ಎಂದು ನುಡಿಯುತ್ತಾರೆ. ಸಾಕ್ಷಿ ಹೇಳಲು ಮಾಗಡಿ ಪೋಲಿಸ್ ರವರು ನಿಮಗೆ ನೋಟಿಸ್ ಕೊಟ್ಟಿದ್ದರ ಎಂದರೆ ಸಾಕ್ಷಿ ಹೌದು ಎಂದು

ನುಡಿಯತ್ತಾರೆ. ನಿಮ್ಮ ಹೇಳಿಕೆಯಲ್ಲಿ ಹೇಳಿರುವ ವಿಚಾರಗಳನ್ನು ನಿಮಗೆ ಯಾರು ತಿಳಿಸಿದ್ದರು ಎಂದರೆ ಸಾಕ್ಷಿಯು ನರಸೇಗೌಡರವರು ಎಂದು ನುಡಿಯುತ್ತಾರೆ. ನೀವು ಹೇಳಿಕೆಯನ್ನು ಕೊಡುವ ದಿವಸದಂದು ನರಸೇಗೌಡರವರು ನಿಮ್ಮ ಜೊತೆ ಬಂದಿದ್ದರ ಎಂದರೆ ಸಾಕ್ಷಿ ಇಲ್ಲ ಎಂದು ನಡಿಯುತ್ತಾರೆ. ನಿಮ್ಮ ಜೊತೆ ಸದರಿ ದಿನದಂದು ಯಾರು ಯಾರು ಹೇಳಿಕೆ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ನರಸಿಂಹಮೂರ್ತಿಯವರು ಮಾತ್ರ ಎಂದು ನುಡಿಯತ್ತಾರೆ,

ಎಲ್ಲಿ ಮಾತುಕತೆಯನ್ನು ಮಾಡಿರುತ್ತೀರಿ ಎಂದರೆ ಸಾಕ್ಷಿ ಆರೋಪಿಗಳ ಮನೆಯಲ್ಲಿ ಎಂದು ನುಡಿಯುತ್ತಾರೆ. ನಿಶ್ಚಿತಾರ್ಥದ ಎಷ್ಟು ದಿವಸಗಳ ಮೊದಲು ಮಾತುಕತೆ ಮಾಡಿರುತ್ತೀರಿ ಎಂದರೆ ಸಾಕ್ಷಿ ನಿಖರವಾಗಿ ಗೊತ್ತಿರುವುದಿಲ್ಲ ಆದರೆ ನಿಶ್ಚಿತಾರ್ಥದ 2 ತಿಂಗಳ ಮೊದಲು ಎಂದು ನುಡಿಯುತ್ತಾರೆ. ಮಾತುಕತೆಗೆ ಎಲ್ಲಿಂದ ಯಾರ ಮನೆಗೆ ಹೋಗಿರುತ್ತೀರಿ ಎಂದರೆ ಸಾಕ್ಷಿ ಬೆಳಗುಂಭದಿಂದ ಮಂಡ್ಯಕ್ಕೆ ನಾನು, ನರಸಿಂಹಮೂರ್ತಿ, ಅಶೋಕ್ ಕುಮಾರ್ , ನರಸೇಗೌಡರು , ಅವರ ಪತ್ನಿ. ಹಾಗೂ ನರಸೇಗೌಡರವರ ಸಂಬಂಧಿಕರಾದ ಶಾಮಣ್ಣ ಬಂದಿದ್ದರು ಎಂದು ನುಡಿಯುತ್ತಾರೆ. ಬಸ್ಸಿನಲ್ಲಿ ಹೋಗಿದ್ದಿರೋ ಅಥವಾ ಸ್ವಂತ ವಾಹನವದಲ್ಲಿ ಹೋಗಿದ್ದಿರೋ ಎಂದರೆ ಸಾಕ್ಷಿ ಸ್ವಂತ ವಾಹನದಲ್ಲಿ ಎಂದು ನುಡಿಯುತ್ತಾರೆ. ನೀವು ಮಾತುಕತೆಗೆ ಹೋಗುವ ಮೊದಲು ಮಾಗಡಿ ಪೋಲಿಸ್ ಠಾಣೆಯಲ್ಲಿ ಮಂಡ್ಯಕ್ಕೆ ಮಾತುಕತೆಗೆ ಹೋಗುತ್ತಿದ್ದೇವೆ ಎಂದು ಏನಾದರೂ ಅನುಮತಿ ಪಡೆದಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಮಾತುಕತೆಯ ಸಮಯದಲ್ಲಿ ಆರೋಪಿಗಳು ಇನೋವಾ ಕಾರನ್ನು ಹಾಗೂ ಜಮೀನನ್ನು ಕೊಡಿ ಎಂದು ಕೇಳಿದ್ದಿರಲಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ವಿವಾಹವನ್ನು ಅದ್ದೂರಿಯಾಗಿ ಮಾಡಿಕೊಡಿ ಎಂದೂ ಸಹ ಕೇಳಿದ್ದಿರಲಿಲ್ಲ ಎಂದರೆ ಸಾಕ್ಷಿ ಪ್ರಸ್ತಾವನೆ ಇತ್ತು ಆದರೆ

ಕೋರೋನಾ ಇದ್ದಿದ್ದರಿಂದ ಸರಳವಾಗಿ ಮಾಡಿಕೊಟ್ಟಿರುತ್ತರೆ ಎಂದು ನುಡಿಯುತ್ತಾರೆ. ನೀವು ಮದುವೆ ಗೆ ಹೋಗಿದ್ದಿರ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆದಿಚುಂಚನಗಿರಿ ಮಠದಲ್ಲಿ ರೂ. 20000/- ಕಟ್ಟಿದರೆ ಅವರೇ ವಿವಾಹವನ್ನು ಮಾಡಿಸುತ್ತಾರೆ ಮತ್ತು ಊಟವನ್ನು ಸಹ ಕೊಡುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ನೀವು ಹಾಗೂ ಚಾಸಾ-2 ರವರು ಒಂದೇ ಊರಿನವರು ಮತ್ತು ಸ್ನೇಹಿತರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಒಡವೆ ಕರೀದಿ ಮಾಡುವಾಗ ನಿಮ್ಮನ್ನು ಕರೆದುಕೊಂಡು ಹೋಗಿದ್ದರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಯಾವ ಯಾವ ವಡವೆ ಕರೀದಿ ಮಾಡಿರುತ್ತಾರೆ ಂದು ನಿಮಗೆ ಹೇಳಿದ್ದರ ಎಂದರೆ ಸಾಕ್ಷಿಯು ಉಂಗುರ , ಬ್ರಾಸ್ ಲೈಟ್ ಮತ್ತು ಕೊರಳಿನ ಚೈನ್ ಕರೀದಿ ಮಾಡಿತುತ್ತೇವೆ ಎಂದುಹೇಳಿದ್ದಎಂದು ನುಡಿಯುತ್ತಾರೆ. ಮದುವೆಯ ದಿನದಂದು ಸದರಿ ಒಡವೆಗಳನ್ನು ಕೊಟ್ಟಿದ್ದರ ಬಗ್ಗೆ ನೀವು ನೋಡಿರುತ್ತೀರಾ ಎಂದರೆ ಸಾಕ್ಷಿ ನೋಡಿರುವುದಿಲ್ಲ ಎಂದು ನುಡಿಯುತ್ತಾರೆ.

ಮದುವೆಯಾದ ನಂತರ ನೀವು ನ್ಯಾಯ ತೀರ್ಮಾನಕ್ಕೆ ಕೂತಿದ್ದಿರ ಎಂದರೆ ಸಾಕ್ಷಿ ಅವರು ಬಂದಿರುವುದಿಲ್ಲ ಹೇಗೆ ನ್ಯಾಯಾ ತಿರ್ಮಾನ ಮಾಡಲಿ ಎಂದು ನುಡಿಯುತ್ತಾರೆ. ಮಾಗಡಿಯ ಬಾಡಿಗೆ ಮನಯಲ್ಲಿ ನಡದಂತಹ ವಿಚಾರದ ಬಗ್ಗೆ ನಿಮಗೆ ಖುದ್ದಾಗಿ ಮಾಹಿತಿ ಇದೆಯೆ ಎಂದರೆ ಸಾಕ್ಷಿ ಇಲ್ಲ ಚಾಸಾ 2 ರವರು ಹೇಳಿದ್ದರು ಎಂದು ನುಡಿಯುತ್ತಾರೆ. ಚಾಸಾ2 ರವರು ಹೇಳಿರುವ ವಿಚಾರಗಳು ಸರಿ ಇರುತ್ತದೆಯೋ ಅಥವಾ ಇಲ್ಲವೊ ಎಂದು ನೀವು 1 ನೇ ಆರೋಪಿಗೆ ವಿಚಾರಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮೊದಲು ಚಾಸಾ1 ರವರು ದೂರನ್ನು ಎಲ್ಲಿ ಕೊಟ್ಟಿದ್ದರು ಎಂದು ಗೊತ್ತಿರುತ್ತದೆಯೇ ಎಂದರೆ ಸಾಕ್ಷಿ ಮಾದನಾಯಕನಹಳ್ಳಿಯಲ್ಲಿ ಎಂದು ನುಡಿಯುತ್ತಾರೆ. ದೂರನ್ನು ಕೂಡಲು ನೀವು ಹೋಗಿದ್ದಿರ ಎಂದರೆ ಸಾಕ್ಷಿ ಇಲ್ಲ

ಎಂದು ನುಡಿಯುತ್ತಾರೆ. ಚಾಸಾ 1 ರವರು ಈಗ ಬೇರೆಬೇರೆ ವಿವಾಹ ಆಗಿರುತ್ತಾರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚಾಸಾ-1 ರವರ 2 ನೇ ವಿವಾಹಕ್ಕೆ ನೀವು ಹೋಗಿದ್ದಿರ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.ಚಾಸಾ1 ರವರು 2 ನೇ ವಿವಾಹ ಆಗುವ ಮೊದಲು ನೀವು ಹಾಗೂ ಇತರರು ಮಂಡ್ಯಕ್ಕೆ ಹೋಗಿ ಆರೋಪಿಗಳ ಮನೆಗೆ ಹೋಗಿ ಮಾತುಕತೆ ಮಾಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಚಾಸಾ1 ರವರು ಬೇರೆ ವಿವಾಹವನ್ನು ಆಗುವ ಸಲುವಾಗಿ ಒಂದು ಸುಳ್ಳು ದೂರನ್ನು ಕೊಟ್ಟು ನಿಮ್ಮ ಮೂಲಕ ಸುಳ್ಳು ಸಾಕ್ಷ್ಯ ಹೇಳಿಸುತ್ತಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯತ್ತಾರೆ. ನೀವು ಮಂಡ್ಯಕ್ಕೆ ಮಾತುಕತೆಗೆ ಹೋಗಿರುವುದಿಲ್ಲ ಹಾಗೂ ಮಾತು ಕತೆಯಲ್ಲಿ ಭಾಗಿಯಾಗಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯತ್ತಾರೆ. ಚಾಸಾ2 ರವರು ಬರೆಸಿರುವ ವಿಚಾರಕ್ಕೆ ನೀವು ಸಹಿ ಮಾಡಿದ್ದು, ನೀವು ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನೀವು ಆದಿಚುಂಚನಗಿರಿ ಮಠಕ್ಕೆ ವಿವಾಹಕ್ಕೆ ಹೋಗಿರುವುದಿಲ್ಲ ಆ ಕಾರಣದಿಂದ ಅಲ್ಲಿ ಏನು ನಡೆದಿರುತ್ತದೆ ಎಂದು ನಿಮಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ, ಆರೋಪಿಗಳು ಯಾವುದೇ ವರದಕ್ಷಿಣೆ ಕಿರುಕುಳ ನೀಡದೆ ಇದ್ದರೂ ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ .

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.**
**ಮಾಗಡಿ.**

# ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 3372/ 2022

**ಚಾಸಾ ಃ- 12 / ಪ್ರಾಸಾ ಃ- 09**

| | |
|---|---|
| ಹೆಸರು | ಕೋಟಪ್ಪ |
| ತಂದೆ ಹೆಸರು | ನರಸಪ್ಪ |
| ವಯಸ್ಸು | 55 |
| ಉದ್ಯೋಗ | ವ್ಯವಸಾಯ |
| ವಿಳಾಸ | ಬೆಳಗುಂಭ |

**ದಿನಾಂಕಃ 01.02.2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಈಗ ಸಾಕ್ಷಿಗೆ ನಿಪಿ-18 ಅನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-18(ಬಿ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ನಿಪಿ-2 ಅನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದುಬ ಗುರುತಿಸಲಾಯಿತು. ಈಗ ಸಾಕ್ಷಿಗೆ ನಿಪಿ-17 ಅನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-17(ಬಿ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ನಿಪಿ-3 ಅನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ಮಹಜರ್ ಗೆ ಸಲುವಾಗಿ 2 -3 ವರ್ಷದ ಹಿಂದೆ ಮಾಡಿರುತ್ತೇನೆ. ಸದರಿ ಸಹಿಯನ್ನು ಕಲ್ಯಾ ಗೇಟ್ ಹತ್ತಿರ ಹಾಕಿರುತ್ತೇನೆ. ವರದಕ್ಷಿಣೆ ಕಿರುಕುಳ

ಆಗಿರುತ್ತದೆ ಎಂದು ಪಂಚನಾಮೆಗೆ ಬರಲು ಕೇಳಿದ್ದರಿಂದ ಪಂಚನಾಮೆಗೆ ಸಹಿ ಮಾಡಿರುತ್ತೇನೆ. ಪಂಚನಾಮೆಯ ಕಾಲದಲ್ಲಿ ನಾನು, ಚಾಸಾ1 ಮತ್ತು ಚಾಸಾ11 ರವರು ಇದ್ದೆವು. ಸದರಿ ಪಂಚನಾಮೆಯ ಕಾಲದಲ್ಲಿ ಪೋಟೋವನ್ನು ತೆಗೆದುಕೊಂಡಿರುತ್ತಾರೆ. ಈಗ ಸಾಕ್ಷಿಗೆ ನಿಪಿ-13 ರಿಂದ 16 ರ ಪೋಟೋಗಳನ್ನು ತೋರಿಸಲಾಗಿ ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**
**ಪಾಟೀ ಸವಾಲು ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ದಿನಾಂಕ 04.09.2021 ರಂದು ಮಾದನಾಯಕನಹಳ್ಳಿ ಪೋಲಿಸರು ಮಹಜರ್ ಗೆ ಸಹಕರಿಸಲು ನಿಮಗೆ ಹಾಗೂ ನಾರಾಯಣಪ್ಪ ರವರಿಗೆ ನೋಟಿಸ್ ಕೊಟ್ಟಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅದರಂತೆ ಅದೇ ದಿನ ಮಾಗಡಿ ಟೌನ್ ಕುಣಿಗಲ್ ರಸ್ತೆ ಶ್ರೀನಿಧಿ ಲೇಔಟ್ ಸಮೀಪದ ಜ್ಯೋತಿ ನಗರದಲ್ಲಿ ಮಧ್ಯಹ್ನ 2.30 ರಿಂದ 3.15 ಗಂಟೆವರೆಗೆ ಮಹಜರನ್ನು ಜರುಗಿಸಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ದಿನಾಂಕ 09.10.2021 ರಂದು ಮಾಗಡಿ ಪೋಲಿಸರು ಮಹಜರ್ ಗೆ ಸಹಕರಿಸಲು ನಿಮಗೆ ಮತ್ತು ನಾರಾಣಯಪ್ಪ ರವರಿಗೆ ನೋಟಿಸ್ ಕೊಟ್ಟಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅದರಂತೆ ಅದೇ ದಿನ ಮಾಗಡಿ ಟೌನ್ ಕುಣಿಗಲ್ ರಸ್ತೆ ಶ್ರೀನಿಧಿ ಲೇಔಟ್ ಸಮೀಪದ ಜ್ಯೋತಿ ನಗರದಲ್ಲಿ ಬೆಳಿಗ್ಗೆ 10.00 ರಿಂದ 10.45 ಗಂಟೆವರೆಗೆ ಮಹಜರನ್ನು ಜರುಗಿಸಿ ನಿಮ್ಮ , ಚಾಸಾ1 ಮತ್ತು 11 ರವರ ಸಹಿ ಪಡೆದಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ

ಪಂಚನಾಮೆಯನ್ನು ನಿಮಗೆ ಓದಿ ತಿಳಿಸಿ ಸಹಿ ಪಡೆದಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಪಂಚನಾಮೆಯನ್ನು ಜರುಗಿಸಿ ಈಗ 4 ವರ್ಷ ಆದ ಕಾರಣ ದಿನಾಂಕ ಮತ್ತು ಸಮಯವನ್ನು ಮರೆತಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

**ಪಾಟೀಸವಾಲುಃ ಆರೋಪಿತರ ಪರ ಶ್ರೀ ಎಲ್ ಜಿ ಜಿ ವಕೀಲರಿಂದಃ**

ನೀವು ಜ್ಯೋತಿನಗರದಲ್ಲಿ ವಾಸವಾಗಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಮಹಜರ್ ಜರುಗಿಸಿದ ಮನೆಯ ಅಕ್ಕಪಕ್ಕ ಯಾರು ಯಾರು ಇದ್ದಾರೆ ಹಾಗೂ ಏನು ಇದೆ ಎಂದು ನಿಮಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಬಿಲ್ಡಿಂಗ್ ನ ಮಾಲೀಕರು ಯಾರು ಹಾಗು ಅವರ ಹೆಸರು ಏನು ಎಂದು ಸಹ ನಿಮಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿ ಹೆಸರು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಬಿಲ್ಡಿಂಗ್ ನಲ್ಲಿ ಎಷ್ಟು ಮನೆಗಳು ಇವೆ, ಎಷ್ಟು ಫ್ಲೋರ್ ಗಳು ಇವೆ ಮತ್ತು ಯಾರು ಯಾರು ವಾಸ ಇದ್ದಾರೆ ಎಂದು ನಿಮಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿ 3 ಫ್ಲೋರ್ ಗಳು ಇದ್ದು ಯಾರುಯಾರು ಇರುತ್ತಾರೆ ಎಂದು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

ಸದರಿ ಬಿಲ್ಡಿಂಗ್ ಮನೆಯವರು ಪಂಚನಾಮೆಯಲ್ಲಿ ಪಾಲ್ಗೊಂಡಿದ್ದರ ಎಂದರೆ ಸಾಕ್ಷಿ ಹೋಟೆಲ್ ನವರು ಇದ್ದಿದ್ದರು ಆದರೆ ಯಾರೂ ಹತ್ತಿರಕ್ಕೆ ಬಂದಿದ್ದಿರಲಿಲ್ಲ ಎಂದು ನುಡಿಯುತ್ತಾರೆ. ಪೋಲಿಸರು ಸದರಿ ಬಿಲ್ಡಿಂಗ್ ನಲ್ಲಿ ಇರುವವರಿಗೆ ಸಹಿ ಮಾಡಲು ಕೇಳಿದ್ದರ ಎಂದರೆ ಸಾಕ್ಷಿ ಯಾರೂ ಇದ್ದಿರಲಿಲ್ಲ ನಾವೆ 3 ಜನ ಇದ್ದಿದ್ದೆವು ಎಂದು ನುಡಿಯುತ್ತಾರೆ. ನೀವು ಪಂಚನಾಮೆಗೆ ಹೋದಾಗ ಸದರಿ ಮನೆಯಲ್ಲಿ ಯಾರು ವಾಸ ಇದ್ದಿದ್ದರು ಎಂದರೆ ಸಾಕ್ಷಿ ಚಾಸಾ1 ಮತ್ತು ಅವರ ಪತಿ ಎಂದು ನುಡಿಯುತ್ತಾರೆ. ನೀವು ಮಹಜರ್ ಗೆ

ಹೋಗಿರುವುದಿಲ್ಲ ಪೋಲಿಸ್ ರವರು ಮಹಜರನ್ನು ಬರೆದುಕೊಂಡು ಬಂದಿದ್ದಕ್ಕೆ ನೀವು ಠಾಣೆಯಲ್ಲಿ ಸಹಿ ಮಾಡಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಚಾಸಾ 2 ರವರು ನಿಮ್ಮ ಸ್ನೇಹಿತರಾಗಿದ್ದರಿಂದ ಅವರಿಗೆ ಅನುಕೂಲ ಮಾಡಿಕೊಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.**
**ಮಾಗಡಿ.**

# ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 3372/ 2022

**ಚಾಸಾ ಃ- 11 / ಪ್ರಾಸಾ ಃ- 08**

| | |
|---|---|
| ಹೆಸರು | ನಾರಾಯಣಪ್ಪ |
| ತಂದೆ ಹೆಸರು | ನರಸಿಂಹಯ್ಯ |
| ವಯಸ್ಸು | 60 |
| ಉದ್ಯೋಗ | ವ್ಯವಸಾಯ |
| ವಿಳಾಸ | ಬೆಳಗುಂಭ |

**ದಿನಾಂಕಃ 01.02.2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** ಃ- **ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ** ಃ-

ಈಗ ಸಾಕ್ಷಿಗೆ ದಿನಾಂಕ 09.10.2021 ರಂದು ಪಂಚನಾಮೆಗೆ ಹಾಜರಾಗಲು ನೀಡಿದ ನೋಟೀಸನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ನೋಟೀಸನ್ನು ನಿಪಿ17 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-17(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ನಿಪಿ-2 ಅನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದುಬ ಗುರುತಿಸಲಾಯಿತು. ಈಗ ಸಾಕ್ಷಿಗೆ ದಿನಾಂಕ 04.09.2021 ರಂದು ಪಂಚನಾಮೆಗೆ ಹಾಜರಾಗಲು ನೀಡಿದ ನೋಟೀಸನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ನೋಟೀಸನ್ನು ನಿಪಿ18 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ನಿಪಿ-3 ಅನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು

ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಎಂದುಬ ಗುರುತಿಸಲಾಯಿತು. ಸದರಿ ಸಹಿಗಳನ್ನು ಮಹಜರ್ ಗೆ ಸಲುವಾಗಿ 2 ವರ್ಷದ ಹಿಂದೆ ಮಾಡಿರುತ್ತೇನೆ. ಚಸಾ1 ಮತ್ತು ಅವರ ಪತಿ ಗಲಾಟೆ ಮಾಡಿಕೊಂಡಿದ್ದ ಸಂಬಂಧ ಗ್ರಾಮಸ್ಥರು ಪಂಚನಾಮೆಗೆ ಬರಲು ಕೇಳಿದ್ದರಿಂದ ಪಂಚನಾಮೆಗೆ ಸಹಿ ಮಾಡಿರುತ್ತೇನೆ. ಪಂಚನಾಮೆಯ ಕಾಲದಲ್ಲಿ ನಾನು, ಚಾಸಾ1 ಮತ್ತು ಚಾಸಾ12 ರವರು ಇದ್ದೆವು.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**
**ಪಾಟೀ ಸವಾಲು ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ದಿನಾಂಕ 04.09.2021 ರಂದು ಮಾದನಾಯಕನಹಳ್ಳಿ ಪೋಲಿಸರು ಮಹಜರ್ ಗೆ ಸಹಕರಿಸಲು ನಿಮಗೆ ನೋಟಿಸ್ ಕೊಟ್ಟಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅದರಂತೆ ಅದೇ ದಿನ ಮಾಗಡಿ ಟೌನ್ ಕುಣಿಗಲ್ ರಸ್ತೆ ಶ್ರೀನಿಧಿ ಲೇಔಟ್ ಸಮೀಪದ ಜ್ಯೋತಿ ನಗರದಲ್ಲಿ ಮಧ್ಯಹ್ನ 2.30 ರಿಂದ 3.15 ಗಂಟೆವರೆಗ ಮಹಜರನ್ನು ಜರುಗಿಸಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಮ್ಮ ಸಮಕ್ಷಮ ಪೋಲಿಸರು 4 ಪೋಟೋವನ್ನುತೆಗೆದಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ದಿನಾಂಕ 09.10.2021 ರಂದು ಮಾಗಡಿ ಪೋಲಿಸರು ಮಹಜರ್ ಗೆ ಸಹಕರಿಸಲು ನಿಮಗೆ ಮತ್ತು ಕೋಟಪ್ಪ ರವರಿಗೆ ನೋಟಿಸ್ ಕೊಟ್ಟಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅದರಂತೆ ಅದೇ ದಿನ ಮಾಗಡಿ ಟೌನ್ ಕುಣಿಗಲ್ ರಸ್ತೆ ಶ್ರೀನಿಧಿ ಲೇಔಟ್ ಸಮೀಪದ ಜ್ಯೋತಿ ನಗರದಲ್ಲಿ ಬೆಳಿಗ್ಗೆ 10.00 ರಿಂದ 10.45 ಗಂಟೆವರೆಗೆ ಮಹಜರನ್ನು ಜರುಗಿಸಿ ನಿಮ್ಮ, ಚಾಸಾ1 ಮತ್ತು 12 ರವರ ಸಹಿ ಪಡೆದಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಪಂಚನಾಮೆಯನ್ನು ನಿಮಗೆ ಓದಿ

ತಿಳಿಸಿ ಸಹಿ ಪಡೆದಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಪಂಚನಾಮೆಯನ್ನು ಜರುಗಿಸಿ ಈಗ 4 ವರ್ಷ ಆದ ಕಾರಣ ದಿನಾಂಕ ಮತ್ತು ಸಮಯವನ್ನು ಮರೆತಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

**ಪಾಟೀಸವಾಲು:: ಆರೋಪಿತರ ಪರ ಶ್ರೀ ಎಲ್ ಜಿ ಜಿ ವಕೀಲರಿಂದ::**

ನೀವು ಜ್ಯೋತಿನಗರದಲ್ಲಿ ವಾಸವಾಗಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಮಹಜರ್ ಜರುಗಿಸಿದ ಮನೆಯ ಅಕ್ಕಪಕ್ಕ ಯಾರು ಯಾರು ಇದ್ದಾರೆ ಹಾಗೂ ಏನು ಇದೆ ಎಂದು ನಿಮಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ ಸದರಿ ಬಿಲ್ಡಿಂಗ್ ನ ಮಾಲೀಕರು ಯಾರು ಹಾಗು ಅವರ ಹೆಸರು ಏನು ಎಂದು ಸಹ ನಿಮಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಬಿಲ್ಡಿಂಗ್ ನಲ್ಲಿ ಎಷ್ಟು ಮನೆಗಳು ಇವೆ, ಎಷ್ಟು ಫ್ಲೋರ್ ಗಳು ಇವೆ ಮತ್ತು ಯಾರು ಯಾರು ವಾಸ ಇದ್ದಾರೆ ಎಂದು ನಿಮಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿ ಹೌದು ಆದರೆ ಚಾಸಾ1 ರವರು ಮೇಲೆ ವಾಸಿಸುತ್ತಿದ್ದರು ಎಂದು ನುಡಿಯುತ್ತಾರೆ.

ಸದರಿ ಬಿಲ್ಡಿಂಗ್ ಮನೆಯವರು ಪಂಚನಾಮೆಯಲ್ಲಿ ಪಾಲ್ಗೊಂಡಿದ್ದರ ಎಂದರೆ ಸಾಕ್ಷಿ ಇದ್ದಿದ್ದರು ಆದರೆ ಯಾರೂ ಹತ್ತಿರಕ್ಕೆ ಬಂದಿದ್ದಿರಲಿಲ್ಲ ಎಂದು ನುಡಿಯುತ್ತಾರೆ. ಪೋಲಿಸರು ಸದರಿ ಬಿಲ್ಡಿಂಗ್ ನಲ್ಲಿ ಇರುವವರಿಗೆ ಸಹಿ ಮಾಡಲು ಕೇಳಿದ್ದರ ಎಂದರೆ ಸಾಕ್ಷಿ ಕೇಳಿದ್ದರು ಆದರೆ ಅವರು ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಚಾಸಾ 2 ರವರಿಗೋಸ್ಕರ ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಲು ತಯಾರು ಇರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀವು ಪಂಚನಾಮೆಗೆ ಹೋದಾಗ ಸದರಿ

ಮನೆಯಲ್ಲಿ ಯಾರು ವಾಸ ಇದ್ದಿದ್ದರು ಎಂದರೆ ಸಾಕ್ಷಿ ಚಾಸಾ1 ಮತ್ತು ಅವರ ಪತಿ ಎಂದು ನುಡಿಯುತ್ತಾರೆ. ನೀವು ಮಹಜರ್ ಗೆ ಹೋಗಿರುವುದಿಲ್ಲ ಪೋಲಿಸ್ ರವರು ಮಹಜರನ್ನು ಬರೆದುಕೊಂಡು ಬಂದಿದ್ದಕ್ಕೆ ನೀವು ಠಾಣೆಯಲ್ಲಿ ಸಹಿ ಮಾಡಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಚಾಸಾ 2 ರವರು ನಿಮ್ಮ ಸ್ನೇಹಿತರಾಗಿದ್ದರಿಂದ ಅವರಿಗೆ ಅನುಕೂಲ ಮಾಡಿಕೊಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.**
**ಮಾಗಡಿ.**

**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 3372/ 2022**

**ಚಾಸಾ ಃ- 08 / ಪ್ರಾಸಾ ಃ- 07**

| | |
|---|---|
| ಹೆಸರು | ನರಸಿಂಹಮೂರ್ತಿ |
| ತಂದೆ ಹೆಸರು | ಸಾಸಲೇಗೌಡ |
| ವಯಸ್ಸು | 57 |
| ಉದ್ಯೋಗ | ಖಾಸಗಿ ಕೆಲಸ |
| ವಿಳಾಸ | ಬೆಂಗಳೂರು |

**ದಿನಾಂಕಃ 01.02.2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಚಾಸಾ-1 ರಿಂದ 7 ರವರು ಪರಿಚಯ ಇರುತ್ತಾರೆ. ಆರೋಪಿತರು ಪರಿಚಯ ಇರುತ್ತಾರೆ. ವರದಕ್ಷಿಣೆ ಕಿರುಕುಳದ ಬಗ್ಗೆ ಹೇಳಿಕೆಯನ್ನು ನೀಡಿರುತ್ತೇನೆ. ಆರೋಪಿಗಳು ಚಾಸಾ-1 ರವರಿಗೆ ಕಿರುಕುಳ ನೀಡುತ್ತಿದ್ದರು ಎಂದು ಚಾಸಾ-1 ರವರು ಹೇಳಿರುತ್ತಾರೆ. ಸದರಿ ಚಾಸಾ-1 ಹಾಗೂ 1 ನೇ ಆರೋಪಿಯವರ ವಿವಾಹವು ಕೋರೋನಾ ಸಮಯದಲ್ಲಿ ಸರಳವಾಗಿ ಆದಿಚುಂಚನಗಿರಿ ಮಠದಲ್ಲಿ ಜರುಗಿರುತ್ತದೆ. ಮದುವೆಯಾದ ಸ್ವಲ್ಪ ದಿವಸಗಳ ಕಾಲ ಮಾಗಡಿಯಲ್ಲಿ ಜೊತೆಯಲ್ಲೆ ಇದ್ದರು. ಸದರಿ ವಿವಾಹವನ್ನು ಸರಳವಾಗಿ ಮಾಡಿದ್ದರಿಂದ 150 ಗ್ರಾಂ ಬಂಗಾರವನ್ನು ವರದಕ್ಷಿಣೆಯಾಗಿ ಮಾತುಕತೆಯ ಮೂಲಕ ಕೊಟ್ಟಿರುತ್ತಾರೆ ಹಾಗೂ ಒಂದು ಇನೋವಾ ಕಾರನ್ನು ಸಹ ಕೊಡಿಸಿರುತ್ತಾರೆ. ಬೆಂಗಳೂರಿನಲ್ಲಿ ಚಾಸಾ-1 ಮತ್ತು 1 ನೇ ಆರೋಪಿಯು ಕೆಲಸ ಮಾಡುತ್ತಿದ್ದರು. ಚಾಸಾ-1 ರವರ ಸಂಬಳವನ್ನು 1 ನೇ ಆರೋಪಿಯು

ತನ್ನ ಖಾತೆಗೆ ವರ್ಗಾವಣೆ ಮಾಡಿಸಿಕೊಂಡು ಚಾಸಾ-1 ರವರಿಗೆ 100 ಹಾಗೂ 50 ರೂಪಾಯಿಗಳನ್ನು ಕೊಡುತ್ತಿದ್ದರು. 1 ನೇ ಆರೋಪಿಯು ನಾವು ಆರ್ಗಾನಿಕ್ ಫಾರಂ ಮಾಡುತ್ತೇವೆ, ಜಮೀನನ್ನು ಬರೆಸಿಕೊಂಡು ಬಾ ಎಂದು ಚಾಸಾ-1 ರವರಿಗೆ ಕಿರುಕುಳ ಕೊಡುತ್ತಿದ್ದರು. ಚಾಸಾ-1 ರವರು 1 ನೇ ಆರೋಪಿ ಜೊತೆ ಇರಲು ಆಗುವುದಿಲ್ಲವೆಂದು ಮಾಗಡಿಯಲ್ಲಿ ಗಲಾಟೆ ಆದ ನಂತರ ಚಾಸಾ-1 ರವರು ವಿಚ್ಛೇಧನಕ್ಕಾಗಿ ಅರ್ಜಿ ಸಲ್ಲಿಸಿದ್ದರು. 1 ನೇ ಆರೋಪಿಯ ತಂದೆ ತಾಯಿಯವರು ಚೆನ್ನಾಗಿ ಬಾಳಲಿ ಎಂದು 1 ನೇ ಆರೋಪಿಗೆ ಸಲಹೆಯನ್ನೂ ಸಹ ಕೊಟ್ಟಿರುವುದಿಲ್ಲ.ಆಗ 2 ಮತ್ತು 3 ನೇ ಆರೋಪಿಗಳೂ ಸಹ ಸರಳವಾಗಿ ವಿವಾಹವಾಗಿದ್ದು ಏನೂ ಕೊಟ್ಟಿರುವುದಿಲ್ಲ ಜಮೀನನ್ನು ಕೊಡಿ ಎಂದು ಕೇಳುತ್ತಿದ್ದರು. ಆ ಕಾರಣದಿಂದ ತೊಂದರೆಯಾಗಿ ವಿಚ್ಛೇಧನ ಆಗಿರುತ್ತದೆ. ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಪರ ವಕೀಲರಿಂದ ಆರೋಪಿತರ ಗುರುತಿಸುವಿಕೆಗೆ ಯಾವುದೇ ತಕರಾರು ಇರುವುದಿಲ್ಲ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಚಾಸಾ–2 ರವರು ನಿಮಗೆ ತುಂಬಾ ಪರಿಚಯವಿದ್ದು ಅವರ ಜಮೀನು ಬೆಳಗುಂಭದಲ್ಲಿ ಇರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚಾಸಾ–2 ರವರು ಆಗಾಗ ಜಮೀನಿನ ಬಳಿ ಬಂದು ನಿಗಾವಹಿಸಿಕೊಂಡು ನೋಡಿಕೊಂಡು ಹೋಗುತ್ತಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚಾಸಾ–2 ರವರಿಗೆ ಒಬ್ಬ ಗಂಡು ಮಗ ಹಾಗು ಇಬ್ಬರು ಹೆಣ್ಣು ಮಕ್ಕಳು ಇದ್ದರು ಅದರಲ್ಲಿ ಚಾಸಾ–1 ರವರು ವಿದ್ಯಾಭ್ಯಾಸವನ್ನು ಮುಗಿಸಿ ಮಾಗಡಿಯ ಬಮೂಲ್ ನಲ್ಲಿ ಪಶುವೈದ್ಯರಾಗಿ

ಕರ್ತವ್ಯ ನಿರ್ವಹಿಸುತ್ತಿದ್ದರು ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಚಾಸಾ–1 ರ ವರು ಕರ್ತವ್ಯ ನಿರ್ವಹಿಸುವ ಜಾಗದಲ್ಲಿ 1 ನೇ ಆರೋಪಿಯು ಪರಿಚಯವಾಗಿ ಅವರಿಬ್ಬರೂ ಸಹ ಮದುವೆಯಾಗಲು ನಿರ್ಧರಿಸಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಈ ವಿಚಾರವಾಗಿ ಚಾಸಾ–2 ರವರು ನಿಮ್ಮ ಹಾಗೂ ನಿಮ್ಮ ಊರಿನ ಅಶೋಕ್ ಕುಮಾರ್ ಜೊತೆ ತನ್ನ ಮಗಳ ಮದುವೆ ವಿಚಾರವಾಗಿ ವಿನಿಮಯ ನಡೆಸಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮಾತುಕತೆ ಇದೆ ಮನೆಯ ಬಳಿ ಬನ್ನಿ ಎಂದು ನಿಮ್ಮನ್ನು ಚಾಸಾ–2 ರವರು ಕರೆದುಹೋಗಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅದರಂತೆ ನೀವು, ನಿಮ್ಮ ಗ್ರಾಮದ ನರೇಂದ್ರ, ಅಶೋಕ್ ಕುಮಾರ್ ಮತ್ತು ನರಸೇಗೌಡರವರ ಸಂಬಂಧಿಯಾ ಕೃಷ್ಣೇಗೌಡ ಮತು ಶಾವಣ್ಣ ರವರು ಮಾತುಕತೆ ಕಾರ್ಯಕ್ಕೆ ಹೋಗಿದ್ದಿರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಕೋವಿಡ್ –19 ಇರುವ ಹಿನ್ನೆಲೆಯಲ್ಲಿ ಮದುವೆಯನ್ನು ಸಿಂಪಲ್ ಆಗಿ ಮಾಡಿ ಹಾಗೂ ಒಡವೆಯನ್ನು ನಿಮಗೆ ಏನು ಇಷ್ಟವೋ ಅದನ್ನು ಹಾಕಿ ಮದುವೆ ಮಾಡಿಕೊಡಿ ಎಂದು ಹೇಳಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅದಕ್ಕೆ ಚಾಸಾ–1 ಹಾಗೂ 1 ನೇ ಆರೋಪಿಯ ತಂದೆ ತಾಯಿಯವರು ಮತ್ತು ಅವರ ಸೋದರ ಮಾವಂದಿರೆಲ್ಲಾ ಒಪ್ಪಿಕೊಂಡಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಶ್ಚಿಥಾರ್ತ ಕಾರ್ಯಯವನ್ನು ಚಾಸಾ–1 ರವರು ಸೋದರ ಮಾವನ ಮನೆಯಾದ ಕುಣಿಗಲ್ ನಲ್ಲಿ ಮಾಡಿಕೊಟ್ಟಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚಾಸಾ–2 ರವರು ಚಾಸಾ–1 ಮತ್ತು 1 ನೇ ಆರೋಪಿಗೆ ಒಡವೆ ಹಾಗೂ ಬ್ರೇಸ್ ಲೇಟ್ , ಕೊರಳ ಚೈನ್ ಹಾಗೂ ಉಂಗುರ ಮತ್ತು ಬೆಳ್ಳಿ ಚೊಂಬು ತಟ್ಟೆಯನ್ನು ಕೊಟ್ಟು ದಿನಾಂಕ 04.11.2020 ರಂದು ಆದಿಚುಂಚನಗಿರಿಯಲ್ಲಿನ ಕಾಳಭೈರವೇಶ್ವರ ಸ್ವಾಮಿ ದೇವಸ್ಥಾನದ ಸನ್ನಿಧಿಯಲ್ಲಿ ಮದುವೆಯನ್ನು ಮಾಡಿಕೊಟ್ಟಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚಾಸಾ–1 ಮತ್ತು 1 ನೇ ಆರೋಪಿಯು

ಮಾಗಡಿಯಲ್ಲೆ ಕೆಲಸ ಮಾಡುತ್ತಿದ್ದರಿಂದ ಮಾಗಡಿಯಲ್ಲಿಯೇ ಬಾಡಿಗೆ ಮನೆ ಮಾಡಿಕೊಂಡು ವಾಸ ವಾಗಿರುತ್ತಾರೆ ಎಂಬ ವಿಚಾರ ನಿಮಗೆ ತಿಳಿದಿತ್ತು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ಸುಮಾರು ಒಂದೆರಡು ತಿಂಗಳುಗಳ ನಂತರ ಚಾಸಾ–2 ರವರು ನಿಮ್ಮ ಊರಿಗೆ ಅವರ ಜಮೀನಿನ ಬಳಿ ಬಂದಾಗ ಅಳಿಯ ಮಗಳು ಹೇಗಿದ್ದಾರೆಂದು ನೀವು ಹಾಗೂ ನರೇಂದ್ರರು ಕೇಳಿದ್ದಕ್ಕೆ ಚಾಸಾ–2 ರವರು ನನ್ನ ಮಗಳು ದುಡಿಯುವ ಸಂಬಳದಲ್ಲಿ ಯಾವ ಸ್ವಾತಂತ್ರ್ಯವನ್ನೂ ಸಹ ಕೊಡದೆ ಸಂಬಳವನ್ನು ಅವರೇ ಪಡೆದುಕೊಳ್ಳುತ್ತಾರೆ ಎಂದು ತಿಳಿಸಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಮ್ಮ ಮನೆಯಲ್ಲಿ ಗಂಡು ಮಕ್ಕಳು ಇರುವುದಿಲ್ಲ ನಿನ್ನ ಪಾಲಿನ ಜಮೀನನ್ನು ಭಾಗ ಕೇಳಿ ಪಡೆದುಕೋ ಎಂದು ಹೇಳಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆರ್ಗಾನಿಕ್ ಫಾರಂ ಅನ್ನು ತೆಗೆಯುತ್ತೇನೆ ನಿಮ್ಮ ಅಪ್ಪ ನಿನಗೆ ಮದುವೆ ಸಮಯದಲ್ಲಿ ವರದಕ್ಷಿಣೆಯಾಗಿ ಏನನ್ನೂ ಕೊಟ್ಟಿರುವುದಿಲ್ಲ ಈಗಲಾದರೂ ಕೊಡುವುದಾಗಿ ನಿಮ್ಮ ಅಪ್ಪನಿಗೆ ಹೇಳು ಎಂದು 1 ನೇ ಆರೋಪಿಯು ಬೈಯ್ಯುತ್ತಿರುತ್ತಾರೆ ಎಂದು ನಿಮಗೆ ತಿಳಿಸಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಈ ವಿಚಾರವನ್ನು 2 ಮತ್ತು 3 ನೇ ಆರೋಪಿಯವರು ಮಾಗಡಿಗೆ ಬಂದಾಗ ಚಾಸಾ–1 ರವರು ಅವರಿಗೆ ಹೇಳಿದಾಗ ಅವರೂ ಸಹ ನನ್ನ ಮಗ ಹೇಳಿದಂತೆ ನಿಮ್ಮ ತಂದೆಗೆ ಹೇಳಿ ಅವನಿಗೆ ವರದಕಿಣೆಯಾಗಿ ಇನೋವಾ ಕಾರ್ ಹಾಗೂ ನಿನ್ನ ಪಾಲಿನ ಜಮೀನನ್ನು ಭಾಗ ಕೇಳಿ ಪಡೆದುಕೊ ಎಂದು ಹೇಳಿದ್ದರು ಎಂದು ತಿಳಿಸಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿನ್ನ ಸಂಬಳವನ್ನೆಲ್ಲಾ ನನ್ನ ಮಗನಿಗೆ ಕೊಡು ಎಂದು ಬೆದರಿಸಿ ಬೈಯ್ಯುತ್ತಿದ್ದರು ಎಂದು ನಿಮಗೆ ತಿಳಿಸಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಹಾಗೇನಾದರೂ ನೀನು ನಿಮ್ಮಪ್ಪನ ಮನೆಯಲ್ಲಿ ನಾವು ಹೇಳಿದ್ದನ್ನು ತರದಿದ್ದರೆ ನನ್ನ ಮಗನಿಗೆ ಬೇರೆ

ಮದುವೆ ಮಾಡಿ ನಿನಗೆ ಜೀವನಾಂಶವನ್ನು ಕೊಡುತ್ತೇವೆ ಎಂದು ಬೈಯ್ಯುತ್ತಾ ಮಾನಸಿಕವಾಗಿ ಹಿಂಸೆ ಕೊಡುತ್ತಿದ್ದರು ಎಂದು ತಿಳಿಸಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ಚಾಸಾ– 1 ರವರು ಚಾಸಾ–2 ಮತ್ತು 3 ರವರಿಗೆ ಹೇಳಿ ಬಹಳ ಬೇಜಾರುಪಟ್ಟಿಕೊಂಡಿದ್ದರು ಎಂದು ನಿಮಗೆ ತಿಳಿಸಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆಗ ನೀವು ಹೋಗಲಿ ಬಿಡಿ ಮುಂದೆ ಎಲ್ಲಾ ಸರಿಹೋಗುತ್ತೆ ಈಗ ಇನ್ನೂ ಮದುವೆಯಾದ ಹೊಸತು ಎಂದು ಹೇಳಿ ಸಮಾಧಾನ ಮಾಡಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ದಿನಾಂಕ 26.06.2021 ರ ಂದು ಚಾಸಾ–2 ರವರ ಮಗ ಕುಲಧೀಪ್ ನ ಸ್ಮಾರಕಕ್ಕೆ ಗ್ರಾನೈಟ್ ಹಾಗೂ ಕಲ್ಲು ಕೂರಿಸುವ ಕೆಲಸ ಬಾಕಿ ಇದ್ದಿದ್ದರಿಂದ ಕೆಲಸವನ್ನು ಮುಗಿಸುವ ಸಲುವಾಗಿ ಚಾಸಾ–3 ಮತ್ತು ಅವರ ಮಕ್ಕಳೆಲ್ಲರೂ ನಿಮ್ಮ ಗ್ರಾಮಕ್ಕೆ ಬಂದಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆಗ ಚಾಸಾ–2 ರವರು ಕೆಲಸ ಮುಗಿಯುವುದು ತಡವಾಯಿತು ಚಾಸಾ–1 ರವರ ಮನೆಗೆ ಹೋಗುತ್ತೇನೆಂದು ಹೇಳಿ ಹೋಗಿರುತ್ತಾರೆಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸುಮಾರು 20 ದಿವಸಗಳ ನಂತರ ನೀವು ಯಾವುದೋ ಕೆಲಸದ ಮೇಲೆ ಬೆಂಗಳೂರಿಗೆ ಹೋಗಿದ್ದು ಹಾಗೆಯೋ ನರಸೇಗೌಡರವರ ಮನೆ ಮಾಚೋಹಳ್ಳಿಗೆ ಹೋಗಿದ್ದಾಗ ಚಾಸಾ–1 ರವರು ಚಾಸಾ 2 ರವರ ಮನೆಯಲ್ಲಿ ಇದ್ದಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಈ ಬಗ್ಗೆ ನೀವು ವಿಚಾರ ಮಾಡಿದಾಗ ಚಾಸಾ–2 ರವರು ದಿನಾಂಕ 26.06.2021 ರಂದು ನಮ್ಮಗಳ ಜೊತೆ ಚಾಸಾ1 ರವರು ನಮ್ಮ ಊ ರಿಗೆ ಬಂದು ತಡವಾಗಿ ಬಂದ ವಿಚಾರವಾಗಿ ನಾವು ಎಷ್ಟೇ ಹೇಳಿದರೂ ಸಹ ಕೇಳದೆ 1 ನೇ ಆರೋಪಿಯು ಚಾಸಾ1 ರವರಿಗೆ ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈಯ್ದು ನಿಮ್ಮಪ್ಪ ನನಗೆ ಏನು ವರದಕ್ಷಿಣೆ ಕೊಟ್ಟಿದ್ದಾನೆ ಎಂದು ಚಾಸಾ1 ರವರಿಗೆ ಹೊಡೆದು ನನಗೂ ಸಹ ವರದಕ್ಷಿಣೆಯಾಗಿ ಏನನ್ನು ಕೊಟ್ಟಿದ್ದೀಯಾ ಎಂದು ಏಕವಚನದಿಂದ

ಬಾಯಿಗೆ ಬಂದಂತೆ ಬೈಯ್ದು ಮನೆಯಿಂದ ನನ್ನನ್ನು ಹಾಗೂ ನನ್ನ ಹೆಂಡತಿ ಮಕ್ಕಳುಗಳನ್ನು ಆಚೆಗೆ ತಳ್ಳಿ ಗಲಾಟೆ ಮಾಡಿದ ಎಂದು ವಿಚಾರವನ್ನು ತಿಳಿಸಿದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆ ನಂತರ ನಿಮಗೆ ವಿಚಾರ ತಿಳಿಯಲಾಗಿ 1 ನೇ ಆರೋಪಿಯು ಇಷ್ಟು ದಿನವಾದರೂ ಸಹ ಚಾಸಾ1 ರವರನ್ನು ವಾಪಸ್ಸು ಮನೆಗೆ ಕರೆದುಕೊಂಡು ಹೊಗುವುದಾಗಲಿ , ಅವರ ಯೋಗಕ್ಷೇಮವನ್ನೂ ಸಹ ವಿಚಾರಿಸದೇ ಇದ್ದು ಮತ್ತು 2 ಮತ್ತು 3 ನೇ ಆರೋಪಿಗಳೂ ಸಹ ಚಾಸಾ1 ರವರ ಬಗ್ಗೆ ಯಾವುದೇ ರೀತಿಯ ಕನಿಕರವನ್ನು ವ್ಯಕ್ತ ಪಡಿಸದಿರುವುದನ್ನು ಕಂಡು ಚಾಸಾ1 ರವರು ಮಾದನಾಯಕನಹಳ್ಳಿ ಪೋಲಿಸ್ ಠಾಣೆಗೆ ದೂರು ನೀಡಿರುತ್ತಾರೆ ಎಂದು ವಿಚಾರ ತಿಳಿಯಿತು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಕೃತ್ಯ ಸ್ಥಳದ ಆಧಾರದ ಮೇಲೆ ಮಾಗಡಿ ಪೋಲಿಸ ಠಾಣೆಯಲ್ಲಿ ಪ್ರಕರಣ ದಾಖಲಾಗಿರುವ ವಿಚಾರ ನಿಮಗೆ ತಿಳಿಯಿತು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆರೋಪಿಗಳು ಚಾಸಾ1 ರವರಿಗೆ ವರದಕ್ಷಿಣೆ ಸಂಬಂಧ ಮಾನಸಿಕ ಮತ್ತು ದೈಹಿಕ ಕಿರುಕುಳ ನೀಡಿದ್ದರಿಂದ ದಿನಾಂಕ 23.11.2021 ರಂದು ನೀವು ಪೋಲಿಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಪ್ರಕರಣ ನಡೆದು 4 ವರ್ಷ ಆಗಿದ್ದರಿಂದ ಮದುವೆ ದಿನಾಂಕ ಮತ್ತು ನಿಶ್ಚಿಥಾರ್ತದ ದಿನಾಂಕ ಮರೆತಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

**ಪಾಟೀ ಸವಾಲು** ಃ- **ಶ್ರೀ. ಎಲ್ ಜಿಜಿ** ವಕೀಲರಿಂದ **ಆರೋಪಿಗಳ** ಪರವಾಗಿ ಃ-

ಹೇಳಿಕೆಯನ್ನು ಎಲ್ಲಿ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ಮಾಗಡಿ ಪೋಲಿಸ್ ಠಾಣೆಯಲ್ಲಿ ಎಂದು ನುಡಿಯುತ್ತಾರೆ. ಸಾಕ್ಷಿ ಹೇಳಲು ಮಾಗಡಿ ಪೋಲಿಸ್ ರವರು ನಿಮಗೆ ನೋಟಿಸ್ ಕೊಟ್ಟಿದ್ದರ ಎಂದರೆ ಸಾಕ್ಷಿ ಹೌದು ಎಂದು ನುಡಿಯತ್ತಾರೆ. ನಿಮ್ಮ ಹೇಳಿಕೆಯಲ್ಲಿ ಹೇಳಿರುವ ವಿಚಾರಗಳನ್ನು ನಿಮಗೆ

ಯಾರು ತಿಳಿಸಿದ್ದರು ಎಂದರೆ ಸಾಕ್ಷಿಯು ನರಸೇಗೌಡರವರು ಎಂದು ನುಡಿಯುತ್ತಾರೆ. ನೀವು ಹೇಳಿಕೆಯನ್ನು ಕೊಡುವ ದಿವಸದಂದು ನರಸೇಗೌಡರವರು ನಿಮ್ಮ ಜೊತೆ ಬಂದಿದ್ದರ ಎಂದರೆ ಸಾಕ್ಷಿ ಇಲ್ಲ ಎಂದು ನಡಿಯುತ್ತಾರೆ. ನಿಮ್ಮ ಜೊತೆ ಸದರಿ ದಿನದಂದು ಯಾಜರು ಯಾರು ಹೇಳಿಕೆ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ನರೇಂದ್ರ ಮಾತ್ರ ಎಂದು ನುಡಿಯತ್ತಾರೆ,

ಎಲ್ಲಿ ಮಾತುಕತೆಯನ್ನು ಮಾಡಿರುತ್ತೀರಿ ಎಂದರೆ ಸಾಕ್ಷಿ ಆರೋಪಿಗಳ ಮನೆಯಲ್ಲಿ ಎಂದು ನುಡಿಯುತ್ತಾರೆ. ನಿಶ್ಚಿಥಾರ್ತದ ಎಷ್ಟು ದಿವಸಗಳ ಮೊದಲು ಮಾತುಕತೆ ಮಾಡಿರುತ್ತೀರಿ ಎಂದರೆ ಸಾಕ್ಷಿ ನಿಖರವಾಗಿ ಗೊತ್ತಿರುವುದಿಲ್ಲ ಆದರೆ ನಿಶ್ಚಿಥಾರ್ತದ 2 ತಿಂಗಳ ಮೊದಲು ಎಂದು ನುಡಿಯುತ್ತಾರೆ. ಮಾತುಕತೆಗೆ ಎಲ್ಲಿಂದ ಯಾರ ಮನೆಗೆ ಹೋಗಿರುತ್ತೀರಿ ಎಂದರೆ ಸಾಕ್ಷಿ ಬೆಳಗುಂಭದಿಂದ ಮಂಡ್ಯಕ್ಕೆ ನಾನು, ನರೇಂದ್ರ , ಅಶೋಕ್ ಕುಮಾರ್ , ನರಸೇಗೌಡರು , ಅವರ ಪತ್ನಿ. ಹಾಗೂ ನರಸೇಗೌಡರವರ ಸಂಬಂಧಿಕರಾದ ಶಾಮಣ್ಣ ಬಂದಿದ್ದರು ಎಂದು ನುಡಿಯುತ್ತಾರೆ. ಬಸ್ಸಿನಲ್ಲಿ ಹೋಗಿದ್ದಿರೋ ಅಥವಾ ಸ್ವಂತ ವಾಹನವದಲ್ಲಿ ಹೋಗಿದ್ದಿರೋ ಎಂದರೆ ಸಾಕ್ಷಿ ಸ್ವಂತ ವಾಹನದಲ್ಲಿ ಎಂದು ನುಡಿಯುತ್ತಾರೆ. ನೀವು ಮಾತುಕತೆಗೆ ಹೋಗುವ ಮೊದಲು ಮಾಗಡಿ ಪೋಲಿಸ್ ಠಾಣೆಯಲ್ಲಿ ಮಂಡ್ಯಕ್ಕೆ ಮಾತುಕತೆಗೆ ಹೋಗುತ್ತಿದ್ದೇವೆ ಎಂದು ಏನಾದರೂ ಅನುಮತಿ ಪಡೆದಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಮಾತುಕತೆಯ ಸಮಯದಲ್ಲಿ ಆರೋಪಿಗಳು ಇನೋವಾ ಕಾರನ್ನು ಹಾಗೂ ಜಮೀನನ್ನು ಕೊಡಿ ಎಂದು ಕೇಳಿದ್ದಿರಲಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ವಿವಾಹವನ್ನು ಅದ್ದೂರಿಯಾಗಿ ಮಾಡಿಕೊಡಿ ಎಂದೂ ಸಹ ಕೇಳಿದ್ದಿರಲಿಲ್ಲ ಎಂದರೆ ಸಾಕ್ಷಿ ಪ್ರಸ್ತಾವನೆ ಇತ್ತು ಆದರೆ ಕೋರೋನಾ ಇದ್ದಿದ್ದರಿಂದ ಸರಳವಾಗಿ ಮಾಡಿಕೊಟ್ಟಿರುತ್ತರೆ ಎಂದು ನುಡಿಯುತ್ತಾರೆ. ನೀವು ಮದುವೆ ಗೆ ಹೋಗಿದ್ದಿರ ಎಂದರೆ ಸಾಕ್ಷಿ ಹೌದು ಎಂದು

ನುಡಿಯುತ್ತಾರೆ. ಆದಿಚುಂಚನಗಿರಿ ಮಠದಲ್ಲಿ ರೂ. 20000/- ಕಟ್ಟಿದರೆ ಅವರೇ ವಿವಾಹವನ್ನು ಮಾಡಿಸುತ್ತಾರೆ ಮತ್ತು ಊಟವನ್ನು ಸಹ ಕೊಡುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ನೀವು ಹಾಗೂ ಚಾಸಾ-2 ರವರು ಒಂದೇ ಊರಿನವರು ಮತ್ತು ಸ್ನೇಹಿತರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಒಡವೆ ಕರೀದಿ ಮಾಡುವಾಗ ನಿಮ್ಮನ್ನು ಕರೆದುಕೊಂಡು ಹೋಗಿದ್ದರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಯಾವ ಯಾವ ವಡವೆ ಕರೀದಿ ಮಾಡಿರುತ್ತಾರೆ ಂದು ನಿಮಗೆ ಹೇಳಿದ್ದರ ಎಂದರೆ ಸಾಕ್ಷಿಯು ಉಂಗುರ , ಬ್ರಾಸ್ ಲೈಟ್ ಮತ್ತು ಕೊರಳಿನ ಚೈನ್ ಕರೀದಿ ಮಾಡಿತುತ್ತೇವೆ ಎಂದುಹೇಳಿದ್ದಎಂದು ನುಡಿಯುತ್ತರೆ. ಮದುವೆಯ ದಿನದಂದು ಸದರಿ ಒಡವೆಗಳನ್ನು ಕೊಟ್ಟಿದ್ದರ ಬಗ್ಗೆ ನೀವು ನೋಡಿರುತ್ತೀರಾ ಎಂದರೆ ಸಾಕ್ಷಿ ನೋಡಿರುವುದಿಲ್ಲ ಎಂದು ನುಡಿಯುತ್ತಾರೆ.

ಮದುವೆಯಾದ ನಂತರ ನೀವು ನ್ಯಾಯ ತೀರ್ಮಾನಕ್ಕೆ ಕೂತಿದ್ದಿರ ಎಂದರೆ ಸಾಕ್ಷಿ ಅವರು ಬಂದಿರುವುದಿಲ್ಲ ಹೇಗೆ ನ್ಯಾಯಾ ತಿರ್ಮಾನ ಮಾಡಲಿ ಎಂದು ನುಡಿಯುತ್ತಾರೆ. ಮಾಗಡಿಯ ಬಾಡಿಗೆ ಮನಯಲ್ಲಿ ನಡದಂತಹ ವಿಚಾರದ ಬಗ್ಗೆ ನಿಮಗೆ ಖುದ್ದಾಗಿ ಮಾಹಿತಿ ಇದೆಯೆ ಎಂದರೆ ಸಾಕ್ಷಿ ಇಲ್ಲ ಚಾಸಾ 2 ರವರು ಹೇಳಿದ್ದರುಎಂದು ನುಡಿಯುತ್ತಾರೆ. ಚಾಸಾ2 ರವರು ಹೇಳಿರುವ ವಿಚಾರಗಳು ಸರಿ ಇರುತ್ತದೆಯೋ ಅಥವಾ ಇಲ್ಲವೊ ಎಂದು ನೀವು 1 ನೇ ಆರೋಪಿಗೆ ವಿಚಾರಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯ್ತಾರೆ. ಮೊದಲು ಚಾಸಾ1 ರವರು ದೂರನ್ನು ಎಲ್ಲಿ ಕೊಟ್ಟಿದ್ದರು ಎಂದು ಗೊತ್ತಿರುತ್ತದೆಯೇ ಎಂದರೆ ಸಾಕ್ಷಿ ಮಾದನಾಯಕನ ಹಳ್ಳಿಯಲ್ಲಿ ಎಂದು ನುಡಿಯುತ್ತಾರೆ. ದೂರನ್ನು ಕೂಡಲು ನೀವು ಹೋಗಿದ್ದಿರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಚಾಸಾ 1 ರವರು ಈಗ ವೇರೆಬೇರೆ ವಿವಾಹ ಆಗಿರುತ್ತಾರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚಾಸಾ-1 ರವರ

2 ನೇ ವಿವಾಹಕ್ಕೆ ನೀವು ಹೋಗಿದ್ದಿರ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.ಚಾಸಾ1 ರವರು 2 ನೇ ವಿವಾಹ ಆಗುವ ಮೊದಲು ನೀವು ಹಾಗೂ ಇತರರು ಮಂಡ್ಯಕ್ಕೆ ಹೋಗಿ ಆರೋಪಿಗಳ ಮನೆಗೆ ಹೋಗಿ ಮಾತುಕತೆ ಮಾಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಚಾಸಾ1 ರವರು ಬೇರೆ ವಿವಾಹವನ್ನು ಆಗುವ ಸಲುವಾಗಿ ಒಂದು ಸುಳ್ಳು ದೂರನ್ನು ಕೊಟ್ಟು ನಿಮ್ಮ ಮೂಲಕ ಸುಳ್ಳು ಸಾಕ್ಷ್ಯ ಹೇಳಿಸುತ್ತಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯತ್ತಾರೆ. ನೀವು ಮಂಡ್ಯಕ್ಕೆ ಮಾತುಕತೆಗೆ ಹೋಗಿರುವುದಿಲ್ಲ ಹಾಗೂ ಮಾತು ಕತೆಯಲ್ಲಿ ಭಾಗಿಯಾಗಿರುವುದಿಲ್ಲ ಎಂದರ ಸಾಕ್ಷಿ ಸುಳ್ಳು ಎಂದು ನುಡಿಯತ್ತಾರೆ. ಚಾಸಾ2 ರವರು ಬರೆಸಿರುವ ವಿಚಾರಕ್ಕೆ ನೀವು ಸಹಿ ಮಾಡಿದ್ದು , ನೀವು ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನೀವು ಆದಿಚುಂಚನಗಿರಿ ಮಠಕ್ಕೆ ವಿವಾಹಕ್ಕೆ ಹೋಗಿರುವುದಿಲ್ಲ ಆ ಕಾರಣದಿಂದ ಅಲ್ಲಿ ಏನು ನಡೆದಿರುತ್ತದೆ ಎಂದು ನಿಮಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ, ಆರೋಪಿಗಳು ಯಾವುದೇ ವರದಕ್ಷಿಣೆ ಕಿರುಕುಳ ನೀಡದೆ ಇದ್ದರೂ ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ .

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.**
**ಮಾಗಡಿ.**